**ಸಾಕ್ಷಿಯನ್ನು ದಿನಾಂಕಃ06.112025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ಶ್ರೀ ಬಿ ಎ ಜಿ ವಕೀಲರಿಂದಃ**

1. ಬಿ ವಿ ಮಾದಪ್ಪ ಮತ್ತು ನಾನು ಅಣ್ಣತಮ್ಮಂದಿರು. ಸರ್ವೆ ನಂಬರ್ 63/2 ರಲ್ಲಿ 6 ಗುಂಟೆ ಜಮೀನಿನ ಬಗ್ಗೆ ಸಾಕ್ಷ್ಯ ನುಡಿಯಲು ನಾನು ಬಂದಿದ್ದೇನೆ. ಸದರಿ ಜಮೀನಿನ ದಾಖಲೆಗಳನ್ನು ನೋಡಿಲ್ಲ, ಜಮೀನು ಬಿ ವಿ ಮಾದಪ್ಪನ ತಮ್ಮ ರಮೇಶನದು ಎಂದು ನನಗೆ ಗೊತ್ತು. ರಮೇಶನಿಗೆ ಆ ಆಸ್ತಿ ಹೇಗೆ ಬಂತು ಎಂದರೆ ಅದು ಅವರ ತಂದೆಯ ಆಸ್ತಿ ಆಗಿತ್ತು. ತಂದೆಯಿಂದ ಭಾಗ ಆಗಿ ರಮೇಶನಿಗೆ ಬಂದಿರುತ್ತದೆ. ನಾನು ಆ ಭಾಗಕ್ಕೆ ಸೇರಿರಲಿಲ್ಲ, ಅವನಿಗೆ ಭಾಗ ಕೊಟ್ಟಿರುವ ವಿಷಯ ನನಗೆ ಗೊತ್ತು. ರಮೇಶನ ತಂದೆಗೆ ಅವರ ಅಣ್ಣ ಬಗ್ಗೇಗೌಡನಿಂದ ಭಾಗವಾಗಿ ಬಂದಿತ್ತು. ನಾನು ಊರಿನಲ್ಲಿ ಇದ್ದಿದ್ದರಿಂದ ನನಗೆ ಆ ವಿಷಯ ಗೊತ್ತು. ಬಗ್ಗೇಗೌಡ ಮತ್ತು ಅವರ ತಮ್ಮ ಭಾಗ ಆಗಿದ್ದು ಸುಮಾರು 50 ವರ್ಷಗಳ ಹಿಂದೆ. ದಾವಾ ಆಸ್ತಿ ಮೂಲ ಬುಡ್ಡೇಗೌಡನ ಮಂಗೇಗೌಡನಿಗೆ ಸೇರಿತ್ತು. ಈಗ ಹಾಲಿ ಭಾಗ ಪತ್ರ ದಾಖಲೆ ವಾದಿಯ ಹೆಸರಿನಲ್ಲಿ ಇರುತ್ತದೆ. ವಿಭಾಗವನ್ನು ಬರವಣಿಗೆಯಲ್ಲಿಯೇ ಮಾಡಿಕೊಂಡಿದ್ದಾರೆ. ಆರ್ ಟಿ ಸಿ ಯನ್ನು ನೋಡಿದ್ದೇನೆ. ಈ ವರ್ಷದ ಆರ್ ಟಿ ಸಿ ವಾದಿಯ ಹೆಸರನಲ್ಲಿ ಇದೆ. ಅವರ ಅಣ್ಣ ತಮ್ಮಂದಿರಲ್ಲಿ ಏನು ತಕರಾರು ಇದೆ ಎಂದು ನನಗೆ ಗೊತ್ತಿಲ್ಲ. ಈ ಕೇಸನ್ನು ಯಾರು ಯಾರ ವಿರುದ್ಧ ಯಾವ ಉದ್ದೇಶಕ್ಕೆ ಹಾಕಿದ್ದಾರೆ ಎಂದು ನನಗೆ ಗೊತ್ತಿಲ್ಲ.

2. ನಾನು ವಾದಿ ಮತ್ತು ಪ್ರತಿವಾದಿಗಳ ಮಧ್ಯೆ ನಡೆದ ನ್ಯಾಯ ಪಂಚಾಯಿತಿಗೆ ಸೇರಿರಲಿಲ್ಲ. ಅವರಿಬ್ಬರು ಕಿತ್ತಾಟ ಮಾಡುತ್ತಿರುವ ವಿಷಯ ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿಗೆ ಕ್ರಯ ಪತ್ರ ಆದ ವಿಷಯ ನನಗೆ ಗೊತ್ತಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಬರೆಸಿರುವ ವಿಷಯಗಳನ್ನು ವಕೀಲರಿಗೆ ರಮೇಶ ಹೇಳಿರುತ್ತಾರೆ. ನನಗೆ ದಾವಾ ವಿಷಯ ಏನೂ ಗೊತ್ತಿರದೇ ಇದ್ದರೂ ಸಹ ಮಾದಪ್ಪನ ಸಂಬಂಧದ ಮೇಲೆ ನಾನು ಸಾಕ್ಷ್ಯ ನುಡಿಯುತ್ತಿದ್ದೇನ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**

ಮದ್ದೂರು.